ಉಪಾಧ್ಯಕ್ಷಿಣಿಯವರು:– ಕ್ವೆಶ್ಚನ್ ಅವರ್ ಆಗುವವರೆಗೆ ಯಾರು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಎಲ್ಲರೂ ಸಹಕಾರ ಮಾಡಬೇಕು. ಮೊದಲು ಕ್ವೆಶ್ಚನ್ ಅವರ್ ಮುಗಿಸೋಣ. ಕೆಶ್ಚನ್ ಅವರ್ ಮುಗಿಯುತ್ತಿದ್ದ ಹಾಗೆ ಆ ವಿಷಯವನ್ನು ತೆಗೆದುಕೊಳ್ಳುತ್ತೇನೆ. ಕ್ವೆಶ್ಚನ್ ಅವರ್‌ಗೆ ಸಹಕಾರ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು:– ಈಗ ಶ್ರೀ ಬಸವರಾಜ ಪಾಟೀಲ್ ಅಟ್ಟೂರ್‌ರವರ ಪ್ರಶ್ನೆ. ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ. ಈಗ ಶ್ರೀ ಯಡಿಯೂರಪ್ಪನವರ ಪ್ರಶ್ನೆ. (ಶ್ರೀ ಬಿ.ಎಸ್. ಯಡಿಯೂರಪ್ಪನವರು ಅಧ್ಯಕ್ಷಪೀಠದ ಎದುರು ನಿಂತು ಮಾತನಾಡುತ್ತಿದ್ದರು).

ಉಪಾಧ್ಯಕ್ಷರು:– ನಿಮ್ಮ ನಿಲುವಳಿ ಸೂಚನೆ ಬಂದಿದೆ.

(ಗೊಂದಲ)

ಉಪಾಧ್ಯಕ್ಷಿಣಿಯವರು:– ಯಾರು ಮಾತನಾಡುವುದೂ ರೆಕಾರ್ಡ್ ಆಗುವುದಿಲ್ಲ. ಈಗ ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತಿದ್ದಾರೆ. ತಾವು ಅವರಿಗೆ ಅವಕಾಶ ಕೊಡಿ.

(ಗೊಂದಲ)

ಉಪಾಧ್ಯಕ್ಷಿಣಿಯವರು:– ನಿಮ್ಮ ನಿಲುವಳಿ ಸೂಚನೆ ಬಂದಿದೆ. ಪ್ರಶ್ನೋತ್ತರ ವೇಳೆ ಆದ ಮೇಲೆ ತೆಗೆದುಕೊಳ್ಳೋಣ. ಈಗ ಶ್ರೀ ಕುರುಡಗಿ ಅವರ ಪ್ರಶ್ನೆ. ಯಡಿಯೂರಪ್ಪನವರೇ, ತಾವು ತಮ್ಮ ಸ್ಥಾನಕ್ಕೆ ಹೋಗಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಈ ರಾಜ್ಯದಲ್ಲಿ ಆಗಿರುವ ಗೋಲೀಬಾರ್ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು. ನಿರಪರಾಧಿಗಳ ಮೇಲೆ ಗೋಲಿಬಾರ್ ನಡೆದಿದೆ. ಈ ಬಗ್ಗೆ ಸರ್ಕಾರದ ನೀತಿಯನ್ನು ವಿರೋಧಿಸಿ, ಕಪ್ಪು ಬಾವುಟವನ್ನು ಪ್ರದರ್ಶಿಸುತ್ತಾ ಸಭಾತ್ಯಾಗ ಮಾಡುತ್ತಿದ್ದೇನೆ. ನಿರಪರಾಧಿಗಳ ಕೊಲೆ ಬಗ್ಗೆ ನ್ಯಾಯಾಂಗ ತನಿಖೆ ಆಗಲೇಬೇಕು.

(ಶ್ರೀ ವಾಟಾಳ್ ನಾಗರಾಜ್ ಅವರು ಕಪ್ಪುಬಾವುಟ ಪ್ರದರ್ಶಿಸುತ್ತಾ ಸಭಾತ್ಯಾಗ ಮಾಡಿದರು.)

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಮಾನ್ಯ ಸದಸ್ಯರು ಹೇಳಿರತಕ್ಕ ಎಲ್ಲಾ ವಿಚಾರಗಳ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ಕಾಲಾವಕಾಶ ಇದೆ. ನಾವು ಈಗ ಕ್ರಮವಾಗಿ ಹೋಗೋಣ. ಪ್ರಶ್ನೋತ್ತರಗಳಿಗೆ ಅವಕಾಶಕೊಟ್ಟು ಅದು ಮುಗಿದ ಮೇಲೆ ಬಾಕಿ ವಿಷಯಗಳನ್ನು ತೆಗೆದುಕೊಳ್ಳಬಹುದು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಈ ಸಭೆ ಯಾವ ಪ್ರಕಾರ ನಡೆಯಬೇಕೆನ್ನುವುದನ್ನು ಮೊದಲು ನಿರ್ಣಯ ಮಾಡಿ. ರೈತರ ಸಮಸ್ಯೆಯ ಬಗ್ಗೆ ಚರ್ಚೆ ಮಾಡಬೇಕು. ಆದರೆ ಆಯೋದ್ಯೆಗೆ ಹೋಗಿ ಸಾವಿರಾರು ಜನರನ್ನು ಕೊಂದು ಇಲ್ಲಿ ನೆರೆಹಾವಳಿಯ ಬಗ್ಗೆ ಮಾತನಾಡಲಿಕ್ಕೆ, ರೈತರ ಬಗ್ಗೆ ಮಾತನಾಡಲಿಕ್ಕೆ ಇವರಿಗೆ ಏನು ಅಧಿಕಾರವಿದೆ ?

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಕೆ.ಎಸ್. ಈಶ್ವರಪ್ಪನವರು ತಮ್ಮ ಪೀಠದಿಂದ ಎದ್ದು

ಬಂದು ಅಧ್ಯಕ್ಷ ಪೀಠದ ಮುಂಭಾಗದಲ್ಲಿ ನಿಂತು ಮಾತನಾಡುತ್ತಾ ಬಾವಿಯೊಳಗೆ ಬಂದರು).

ಶ್ರೀ ಆರ್.ವಿ. ದೇಶಪಾಂಡೆ:– ಈಗ ಶಾಸನಸಭೆ ಯಾವ ಪ್ರಕಾರ ನಡೆಯಬೇಕು ಎನ್ನುವುದನ್ನು ನಿರ್ಣಯ ಮಾಡಿ. ಈಗ ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಮಾಡಿದರು ಅದನ್ನು ನಾನು ಮಾಡಬಹುದು. ಆದರೆ ಒಂದು ಪದ್ಧತಿ ಇದೆ. ಯಾವಾಗ ಏನು ರೈಸ್ ಮಾಡಬೇಕು ಎನ್ನುವ ಪದ್ಧತಿ ಇದೆ. ಅದನ್ನು ಬಿಟ್ಟು ಪೊಲಿಟಿಕಲ್ ಇಮೇಜ್ ತೆಗೆದುಕೊಂಡು ಮಾತನಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಮಾತನಾಡಲಿಕ್ಕೆ ಅವಕಾಶ ಕೊಡಿ, ನಿಲುವಳಿ ಸೂಚನೆ ಕೊಟ್ಟ ಮೇಲೆ ಅದನ್ನು ಯಾವಾಗ ತೆಗೆದುಕೊಳ್ಳಬೇಕು ಎನ್ನುವುದನ್ನು ನಿರ್ಣಯ ಮಾಡಬೇಕಾಗುತ್ತದೆ. ಮುಖ್ಯಮಂತ್ರಿಗಳ ಜೊತೆಯಲ್ಲಿ ಸಭೆ ಮಾಡಿದ್ದೇವೆ. ಆ ಸಭೆಯಲ್ಲಿ ಯಾವ ಪ್ರಕಾರ ನಡೆಯಬೇಕು ಎನ್ನುವುದು ತೀರ್ಮಾನ ಆಗಿದೆ. ಈಗ ಇಲ್ಲಿ ಬಂದು ಹೀಗೆ ಮಾಡುವುದು ಸರಿಯಲ್ಲ. ಅವರು ಪ್ರೆಸ್ ಪಬ್ಲಿಸಿಟಿ ಬೇಕಾದರೆ ಮಾಡಬಹುದು. ಅದಕ್ಕೆ ನಮ್ಮ ತಕರಾರು ಇಲ್ಲ. ಆದರೆ ರೈತರ ಸಮಸ್ಯೆ ಇದೆ. ನೆರೆಹಾವಳಿಯಿಂದ ಲಕ್ಷಾಂತರ ರೈತರು ಕಷ್ಟದಲ್ಲಿ ಸಿಕ್ಕಿದ್ದಾರೆ, ರೈತರಿಗೆ ಬೆಳೆಗಳು ಹಾಳಾಗಿದೆ. ಅದನ್ನು ನೋಡಲಿಕ್ಕೆ ಇವರು ಹೋಗಿಲ್ಲ. ಇವರು ಅಯೋಧ್ಯೆಗೆ ಹೋಗಿದ್ದಾರೆ. ಅಲ್ಲಿ ಹೋಗಿ ಸಾವಿರಾರು ಜನರನ್ನು ಕೊಂದು ಇಲ್ಲಿ ಬಂದು ರೈತರ ಬಗ್ಗೆ ಮಾತನಾಡುತ್ತಾ ಇದ್ದೀರಾ ?

(ಗೊಂದಲ)

ಉಪಾಧ್ಯಕ್ಷೀಣಿಯವರು:– ಮಾನ್ಯ ಸದಸ್ಯರಾದ ಈಶ್ವರಪ್ಪನವರೇ ತಾವು ಬಾವಿಯಲ್ಲಿ ನಿಂತು ಮಾತನಾಡುವುದು ಸರಿಯಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ನಾನು ಏನು ವಿನಂತಿ ಮಾಡುತ್ತಿದ್ದೇನೆಂದರೆ, ನಾನು ಸಹ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಅದು ಮುಂದೆ ಹೋಗಿದೆ. ಸದನ ಯಾವ ಪ್ರಕಾರ ನಡೆಯಬೇಕೆನ್ನುವುದು ನಿರ್ಣಯವಾಗಬೇಕು. ಎರಡನೆಯದು ರೈತರ ಸಮಸ್ಯೆ ಬಗ್ಗೆ ಚರ್ಚೆಯಾಗಬೇಕು ಅದರ ಬಗ್ಗೆ ಯಾವುದೇ ವಾದ ಇಲ್ಲ. ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದಾಗ ಮಾನ್ಯ ಯಡಿಯೂರಪ್ಪನವರು ಮತ್ತು ವಾಟಾಳ್ ನಾಗರಾಜ್‌ರವರು ಇದ್ದರು. ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಚರ್ಚೆಗೆ ಒಪ್ಪಿಕೊಳ್ಳುತ್ತೇನೆಂದು ಹೇಳಿದ್ದಾರೆ. ಅದಕ್ಕೆ ಇವರೂ ಸಹ ಒಪ್ಪಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಒಪ್ಪಿಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ, ಈ ರಾಜ್ಯದ ರೈತರ ಸಮಸ್ಯೆ ಬಗ್ಗೆ, ನೆರೆ ಹಾವಳಿಯ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದ್ದೇನೆ.

ಉಪಾಧ್ಯಕ್ಷೀಣಿಯವರು:– ನೀವು ಕುಳಿತುಕೊಳ್ಳಿ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಈ ದೇಶವನ್ನು ಹಾಳು ಮಾಡಿದಂತಹ ಜನ ರೈತರ ಬಗ್ಗೆ ಕಣ್ಣೀರು ಸುರಿಸುತ್ತಿದ್ದಾರೆ. ಇವರು ಅಯೋಧ್ಯೆಯ ಹೆಸರು ಹೇಳಿ ದೇಶವನ್ನು ಹಾಳು ಮಾಡುತ್ತಿದ್ದಾರೆ. ಇಂತಹ ಜನ ರೈತರ ಪರವಾಗಿ ಇಲ್ಲ.

(ಗೊಂದಲ)

ಉಪಾಧ್ಯಕ್ಷೀಣಿಯವರು:– ಎಲ್ಲರೂ ಹೀಗೆ ನಿಂತು ಮಾತನಾಡಿದರೆ ಏನೂ ಪ್ರಯೋಜನವಿಲ್ಲ ಯಾರು ಮಾತನಾಡುವುದೂ ಕೇಳುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ತಮಗೆ ಕನ್ವಿನ್ಸ್ ಮಾಡುವುದಕ್ಕೆ ನಿಂತಿದ್ದೇನೆ.